ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಶುಕ್ರವಾರ, ದಿನಾಂಕ : 06 ನೇ ಮಾರ್ಚ್, 2020

All India Coordinated Research Project

ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-

269 (340) ಮಾನ್ಯ ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯ,ಬೀದರ್‌ರಡಿಯ ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು ಇಲ್ಲಿ All India Coordinated Research Project(AICRP) ನಲ್ಲಿ ತಾತ್ಕಾಲಿಕ ಸಿಬ್ಬಂದಿಗಳಿಗೆ ಅಕ್ರಮವಾಗಿ ಸಂಪೂರ್ಣ ವೇತನ ಮತ್ತು ವಾರ್ಷಿಕ ಬಡ್ತಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) AICRP ಯೋಜನೆಯಡಿ ತಾತ್ಕಾಲಿಕ ವಿಜ್ಞಾನಿ (Scientists) ಗಳಿಗೆಮಾಹೆಯಾನ ಏಕೀಕೃತ ವೇತನ ರೂ. 57,400-00 ಗಳನ್ನು 179 ದಿನಗಳಿಗೆ ಮಾತ್ರ ಸೀಮಿತಗೊಳಿಸಿ ನೀಡಲಾಗುತ್ತಿಲ್ಲದಿರುವುದಕ್ಕೆ ಕಾರಣಗಳೇನು ;

(ಇ) ಈ Project ನಡಿ ಎಷ್ಟು ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಎಷ್ಟು ದಿನಗಳಿಗೆ ನೇಮಿಸಿಕೊಳ್ಳಲಾಗಿದೆ ಹಾಗೂ ಅವರಿಗೆ ಎಷ್ಟು ಸಂಬಳ ನೀಡಲಾಗುತ್ತಿದೆ ;

(ಈ) ಸದರಿ Projectನಲ್ಲಿ ಸಿಬ್ಬಂದಿಗಳನ್ನು 179 ದಿನಗಳಿಗೆ ನೇಮಕ ಮಾಡದೆ ಹಾಗೂ ಅವರಿಗೆ ಏಕೀಕೃತ ವೇತನವನ್ನು ನೀಡದೆ ಖಾಯಂ ಸಿಬ್ಬಂದಿಗಳಿಗೆ ನೀಡುವಂತೆ ಹುದ್ದೆಯ ಪೂರ್ಣ ಮೂಲ ವೇತನ, ವಾರ್ಷಿಕ ವೇತನ ಬಡ್ತಿ, ಮನೆ ಬಾಡಿಗೆ ಭತ್ಯೆ ಹಾಗೂ ಇತರೆ ಸವಲತ್ತುಗಳನ್ನು ನೀಡಲಾಗುತ್ತಿರುವುದರಿಂದ ಸಾರ್ವಜನಿಕ ಹಣವು ಪೋಲು ಆಗುತ್ತಿದ್ದು ಅಂತಹವರುಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ;

(ಉ) ಕಾಲೇಜಿಗೆ ಸಂಬಂಧಿಸಿದ ವಿಭಾಗದಲ್ಲಿ (Fish Processing Technology) ಖಾಯಂ Associate Professor ನೌಕರರು ಇದ್ದರೂ ಸಹ, ಈ ಯೋಜನೆಯಡಿ ತಾತ್ಕಾಲಿಕ (Senior Scientist Associate Professor Cadre) ನೌಕರರನ್ನು ನೇಮಕಾತಿ ಮಾಡಲು ಕಾರಣವೇನು ; ಈ ರೀತಿ Senior Scientist ನ್ನು ನೇಮಕಾತಿ ಮಾಡಿಕೊಳ್ಳಲು ಅವಕಾಶವಿದೆಯೇ;

(ಊ) ಈ ಯೋಜನೆಯ ಮುಖ್ಯಸ್ಥರು ಖಾಯಂ Associate Professor ಹುದ್ದೆಯಲ್ಲಿರುವ ಸಿಬ್ಬಂದಿ ಇರಬೇಕೆಂದು ನಿಯಮ ಇದ್ದರೂ ಸಹ ಶಿಕ್ಷಕೇತರ ವೃಂದದಲ್ಲಿರುವ ವಿಶ್ವವಿದ್ಯಾಲಯದ ಹಣಕಾಸು ನಿಯಂತ್ರಣಾಧಿಕಾರಿಗಳು ಸ್ವತಃ ಯೋಜನೆಯ ಮುಖ್ಯಸ್ಥರಾಗಿ ಮುಂದುವರೆಯಲು ಕಾರಣವೇನು ;

(ಋ) ಈ ಯೋಜನೆ ಯಾವ ವರ್ಷದಿಂದ ಚಾಲನೆಯಲ್ಲಿದೆ ; ಬಿಡುಗಡೆ ಮತ್ತು ಖರ್ಚಾದ ಅನುದಾನದ ಸಂಪೂರ್ಣ ವಿವರ ಹಾಗೂ ಕೇಂದ್ರ ಮತ್ತು ರಾಜ್ಯದ ಪಾಲಿನ ಅನುದಾನದ ಮಾಹಿತಿ ನೀಡುವುದು?